ಶ್ರೀ ಜಗದೀಶ್ ಶೆಟ್ಟರ್ :– I will take action. I will take explanation from the concerned.

ಪಾವಗಡ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು

260 (1451) ಶ್ರೀ ಕೆ. ಎಂ. ತಿಮ್ಮರಾಯಪ್ಪ (ಪಾವಗಡ) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕು ಶಾಶ್ವತ ಬರಗಾಲ ಪ್ರದೇಶವೆಂದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ನಂಜುಂಡಪ್ಪ ವರದಿಯಲ್ಲಿ ಪಾವಗಡ ತಾಲ್ಲೂಕು ಅತೀ ಹಿಂದುಳಿದ ತಾಲ್ಲೂಕು ಎಂದು ಗೊತ್ತಿದ್ದರೂ ಇಲ್ಲಿನ ಯುವ ಜನತೆಗೆ ಯಾವುದಾದರೂ ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದರೆ ಒಳ್ಳೆಯದಲ್ಲವೇ;

ಇ) ಯಾವುದೇ ಕೈಗಾರಿಕೆ ಅಥವಾ ಉದ್ದಿಮೆ ಸ್ಥಾಪನೆ ಇಲ್ಲದೆ ಇರುವುದರಿಂದ ಇಲ್ಲಿನ ಯುವ ಜನತೆ ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಿರುವುದೇ;

ಈ) ಹಾಗಿದ್ದಲ್ಲಿ, ಕೈಗಾರಿಕೆ ಸ್ಥಾಪಿಸುವುದರೊಂದಿಗೆ ಯುವ ಜನತೆ ಇನ್ನು ಮುಂದೆ ಸರಿಯಾದ ದಿಕ್ಕಿನಲ್ಲಿ ಸಾಗಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಹೌದು

ಇ) ಹೌದು

ಈ) ಹೌದು. ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಪಾವಗಡ ತಾಲ್ಲೂಕಿನ ಗುಮ್ಮಘಟ್ಟ ಗ್ರಾಮದಲ್ಲಿ ಕರ್ನಾಟಕ ರಾಜ್ಯ ವಿದ್ಯುತ್‌ಮಗ್ಗ ನಿಗಮದ ವತಿಯಿಂದ ವಿದ್ಯುತ್‌ಮಗ್ಗ ಸಂಕೀರ್ಣವನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಲಾಗಿದೆ.

ಇದಕ್ಕಾಗಿ ಒಂದು ಎಕರೆ ಜಮೀನನ್ನು ಗುಮ್ಮಘಟ್ಟ ಗ್ರಾಮದಲ್ಲಿ ಖರೀದಿಸಲಾಗಿದೆ. ಮೊದಲನೇ ಹಂತದಲ್ಲಿ 10 ಜನರಿಗೆ ಈಗಾಗಲೇ ವಿದ್ಯುತ್‌ಮಗ್ಗದಲ್ಲಿ ಆರಂಭಿಕ 6 ತಿಂಗಳ ತರಬೇತಿಯನ್ನು ನೀಡಲಾಗಿದೆ. 10 ವಿದ್ಯುತ್‌ಮಗ್ಗಗಳನ್ನು ಸ್ಥಾಪಿಸಲು ಬೇಕಾಗಿರುವ ಸಾಮಾನ್ಯ ಕಾರ್ಯಾಗಾರ ಮತ್ತು ವಸತಿ ಕಾರ್ಯಾಗಾರಗಳನ್ನು ಒಟ್ಟು ರೂ. 37.80 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಯೋಜಿಸಿದೆ. ಕಟ್ಟಡ ನಿರ್ಮಾಣ ಕಾರ್ಯವನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಎರಡನೇ ಹಂತದಲ್ಲಿ 15 ಜನರಿಗೆ 45.35 ಲಕ್ಷಗಳ ವೆಚ್ಚದಲ್ಲಿ ಮೇಲೆ ತಿಳಿಸಿರುವ ಸೌಲಭ್ಯಗಳನ್ನು ಕಲ್ಪಿಸಲು ಯೋಜಿಸಿದೆ.

ವೈ.ಎನ್. ಹೊಸಕೋಟೆಯಲ್ಲಿ 100 ವಿದ್ಯುತ್ ಮಗ್ಗಗಳ ಸ್ಥಾಪನೆಗೆ ರೂ. 334.29 ಲಕ್ಷಗಳ ಯೋಜನೆಯನ್ನು ರೂಪಿಸಲಾಗಿದೆ.

ಇದಲ್ಲದೆ, 2006–07 ನೇ ಸಾಲಿನಲ್ಲಿ ಸ್ಥಳೀಯ ಜನರಿಗೆ ಉದ್ಯಮಶೀಲತಾ ಅಭಿವೃದ್ಧಿಗಾಗಿ ಪಾವಗಡ ಮತ್ತು ವೈ.ಎನ್. ಹೊಸಕೋಟೆಯಲ್ಲಿ ಉದ್ದಿಮೆ ಶೀಲತಾ ತಿಳುವಳಿಕೆ ಕಾರ್ಯಾಗಾರವನ್ನು ಈಗಾಗಲೇ ಏರ್ಪಡಿಸಲಾಗಿದೆ. ಪಾವಗಡದಲ್ಲಿ ಉದ್ದಿಮೆಶೀಲತಾ ತರಬೇತಿಯನ್ನು ಟೆಕ್ಸಾಕ್ ಸಂಸ್ಥೆಯ ಮೂಲಕ ನಡೆಸಲಾಗಿದೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ :– ಮಾನ್ಯ ಚೇರ್ಮನ್‌ರವರೇ ನಾನು ಪಾವಗಡ ತಾಲ್ಲೂಕು ಶಾಶ್ವತ ಬರಗಾಲ ಪ್ರದೇಶವೆಂದು ಕೇಳಿರುವ ಪ್ರಶ್ನೆಗೆ ಹೌದೆಂದು ಉತ್ತರವನ್ನು ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆ ನಂಜುಂಡಪ್ಪ ವರದಿಯಲ್ಲಿ ಪಾವಗಡ ತಾಲ್ಲೂಕು ಅತೀ ಹಿಂದುಳಿದ ತಾಲ್ಲೂಕು ಎಂದು ಹೇಳಿದ್ದು, ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮುಂದೆ ಬಂದು ಇಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದಿಂದ ಅನುಕೂಲ ಮಾಡಿಯೆಂದು ಕೇಳಿದಾಗ, ಅವರು ಯಾವುದೋ ಒಂದು ಹಳ್ಳಿಯಲ್ಲಿ 10 ಜನರ ಒಂದು ತರಬೇತಿಯನ್ನು ಕೊಡುವಂತಹ ವಿದ್ಯುತ್ ಮಗ್ಗದ ಬಗ್ಗೆ ಮಾತ್ರ ಉತ್ತರದಲ್ಲಿ ಕೊಟ್ಟಿದ್ದರೆ. ಎರಡನೇ ಹಂತದಲ್ಲಿ 15 ಜನರಿಗೆ ತರಬೇತಿಯನ್ನು ಕೊಡಿಸುತ್ತೇವೆಂದು

ಉತ್ತರವನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ವೈ.ಎನ್. ಹೊಸಕೋಟೆ ಮತ್ತು ಪಾವಗಡದಲ್ಲಿ 100 ವಿದ್ಯುತ್ ಮಗ್ಗಗಳ ಸ್ಥಾಪನೆಗೆ 334 ಲಕ್ಷ ರೂಪಾಯಿಗಳನ್ನು ವಿನಿಯೋಗಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳುವಂತಹ ಪ್ರಶ್ನೆಯೆಂದರೆ ಸಾವಿರಾರು ಜನರು ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ನಿರುದ್ಯೋಗ ಸಮಸ್ಯೆಯಿಂದ ಇವತ್ತು ನಗರದ ಅನೇಕ ಭಾಗಗಳಿಗೆ ವಲಸೆ ಹೋಗುವಂಥ ಪರಿಸ್ಥಿತಿ ಇದೆ. ಅಲ್ಲಿನ ವಿದ್ಯಾವಂತರಿಗೆ ಇವತ್ತು ಕೆಲಸವಿಲ್ಲ. ಅವರು ಕೆಲಸಕ್ಕಾಗಿ ಅಲೆದು ಅಲೆದು ಬಹಳ ಸುಸ್ತಾಗಿ ಅನೇಕ ಜನರು ಈಗ ಬೆಂಗಳೂರು ಮತ್ತು ಬೇರೆ ಬೇರೆ ಭಾಗಗಳಿಗೆ ಹೋಗುತ್ತಿರತಕ್ಕಂಥ ಒಂದು ಪರಿಸ್ಥಿತಿ ಇರುವುದರಿಂದ ಪಾವಗಡದಲ್ಲಿ ಯಾವುದಾದರೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದರ ಮುಖಾಂತರ ಅಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲಿಕ್ಕೆ ಏನಾದರೂ ಅನವು ಮಾಡಿಕೊಡಬೇಕೆಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ದಯವಿಟ್ಟು , ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ ನಂಜುಂಡಪ್ಪ ವರದಿಯಲ್ಲಿ ಏನೊಂದು ಅತಿ ಹಿಂದುಳಿದ ತಾಲ್ಲೂಕು ಎಂದು ನಮೂದು ಮಾಡಿದ್ದಾರೆ, ಅಂಥ ಒಂದು ತಾಲ್ಲೂಕಿಗೆ ಆ ಭಾಗದ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಯಾವುದಾದರೂ ಒಂದು ಕೈಗಾರಿಕೆಯನ್ನು ಅಲ್ಲಿ ಸ್ಥಾಪನೆ ಮಾಡುವ ಮೂಲಕ ಅಲ್ಲಿಯ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬೇಕೆಂದು ಸರ್ಕಾರವನ್ನು ಮತ್ತೊಂದು ಸಲ ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :– ಸನ್ಮಾನ್ಯ ಅಧ್ಯಕ್ಷರೇ, ಪವಗಡ ತಾಲ್ಲೂಕಿನಲ್ಲಿ ಈಗಾಗಲೇ ಸುವರ್ಣ ಕಾಯಕ ಉದ್ಯೋಗ ಶಿಕ್ಷಣ ಯೋಜೆಯಡಿಯಲ್ಲಿ 400 ಜನರಿಗೆ ನಾವು ಸಂದರ್ಶನ ಮಾಡಿದ್ದೆವು. ಅವರಿಗೆ interview ಕಳುಹಿಸಿದ್ದರೆ 10 ಜನ ಮಾತ್ರ ಬೆಂಗಳೂರಿಗೆ ಬಂದು ಕೆಲಸ ಮಾಡುತ್ತಾರೆ. ಹಿಂದುಳಿದ ತಾಲ್ಲೂಕು ಆಗಿದ್ದು ಅಲ್ಲಿಯ ನಿರುದ್ಯೋಗಿ ಯುವಕರಿಗೆ ಕೆಲಸ ಕೊಡಿಸಬೇಕೆಂದು ತುಮಕೂರಿಗೆ

ಕರೆದು, ಬೆಂಗಳೂರಿನಲ್ಲಿ ಕರೆದು ಅವರಿಗೆ ಸಂದರ್ಶನ ಮಾಡಿದ್ದರೆ ಅವರು ಬೆಂಗಳೂರಿಗೆ ಬಂದು ಕೆಲಸ ಮಾಡಲಿಕ್ಕೆ ತಯಾರಿಲ್ಲ. ಪಾವಗಡದಲ್ಲಿ ಯಾರಾದರೂ ಖಾಸಗಿಯವರು ಬಂದಾಗ ಮಾತ್ರ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಯಾವ ಜಿಲ್ಲೆಯಲ್ಲಿ, ಯಾವ ತಾಲ್ಲೂಕಿನಲ್ಲಿ ಕೂಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಂಥದ್ದು ಇಲ್ಲ. ಖಾಸಗಿಯವರು ಅಲ್ಲಿಗೆ ಬಂದು ಕಾರ್ಖಾನೆ ಆರಂಭಿಸುವುದಾದರೆ ಖಂಡಿತವಾಗಿ ಅವರಿಗೆ ಪ್ರೋತ್ಸಾಹವನ್ನು ಕೊಡುತ್ತೇವೆ.

ಎರಡನೆಯದಾಗಿ, ಈ ವರ್ಷದ ಬಜೆಟ್‌ನಲ್ಲಿ ನಂಜುಂಡಪ್ಪ ವರದಿಯ ಆಧಾರದ ಮೇಲೆ 1571 ಕೋಟಿ ರೂಪಾಯಿಗಳಷ್ಟು ಹಣವನ್ನು ಮೀಸಲಿಟ್ಟಿದ್ದು, ಆ ತಾಲ್ಲೂಕಿನಲ್ಲಿ ಕೂಡ ಕೈಗಾರಿಕೆಗಳಿಗೆ ಯಾವ ರೀತಿ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ ಆರ್ಥಿಕ ಸಚಿವರ ಜೊತೆ ಮಾತನಾಡಿ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳು

261(1799) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) :- ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಯಾವ ಯಾವ ಸಂಸ್ಥೆಗಳಿಗೆ ವಾಣಿಜ್ಯ ಸಂಕೀರ್ಣ, ಅಪಾರ್ಟ್‌ಮೆಂಟ್, ಮಲ್ಟಿಪ್ಲೆಕ್ಸ್ ಥಿಯೇಟರ್ ಹಾಗೂ ಮಾಲ್‌ಗಳು ಪಂಚತಾರಾ ಹೋಟೆಲ್‌ಗಳನ್ನು ಸ್ಥಾಪಿಸಲು ಅನುಮತಿ ಪತ್ರಗಳನ್ನು ನೀಡಿದ್ದಾರೆ;

ಆ) ಇವುಗಳ ಅಂದಾಜು ವೆಚ್ಚವೆಷ್ಟು; (ಪ್ರತಿಯೊಂದರ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು);